
ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವ ನಮಸ್ಕಾರಃ ಶಂಕರಂ ಪ್ರತಿ ಗಚ್ಛತಿ ॥

ಆಕಾಶದಿಂದ ಬಿದ್ದ ನೀರು ಸಾಗರವನ್ನು ಸೇರುವಂತೆ,
ಎಲ್ಲ ದೇವತೆಗಳಿಗೂ ಮಾಡಿದ ನಮಸ್ಕಾರವು
**ಶಂಕರನಿಗೆ** ಸೇರುತ್ತದೆ.



ಋಷಿಪ್ರಣೀತ

# ವೇದಾಲಯ

**ಶುಭ ಸಮಾರಂಭಗಳಿಗೆ ಪುರೋಹಿತ ಸಂಯೋಜನಾ ಸಂಸ್ಥೆ**

ನಂ. 140, 6ನೇ ಮುಖ್ಯ ರಸ್ತೆ, ಒಂದನೇ ಅಡ್ಡರಸ್ತೆ, ಶಂಕರನಗರ, ಬೆಂಗಳೂರು – 560096
ದೂರವಾಣಿ: 080-23575360 ಮೊಬೈಲ್: 9901845465, 9916490069, 8123218644, 9480514181
ಇಮೇಲ್: vedalaya1234@gmail.com



ಋಷಿಪ್ರಣೀತ

# ವೇದಾಲಯ

ಶುಭ ಸಮಾರಂಭಗಳಿಗೆ ಪುರೋಹಿತ ಸಂಯೋಜನಾ ಸಂಸ್ಥೆ

ಭಾರತೀಯರು ಆಸ್ತಿಕರು ವಿಶೇಷವಾಗಿ ಧರ್ಮಾಚರಣೆಯಲ್ಲಿ ನಂಬಿಕೆಯುಳ್ಳವರು. ಇಲ್ಲಿ ನಂಬಿಕೆಯೇ ಪ್ರಧಾನ. ನಂಬಿಕೆ, ವಿಶ್ವಾಸ, ಶ್ರದ್ಧೆಗಳಿಂದ ತಿಳಿದಿರುವ ಧರ್ಮಗಳನ್ನು ಆಚರಿಸಿ, ತಿಳಿಯದಿರುವ ಧರ್ಮಗಳನ್ನು ನಿಗಮಾಗಮಗಳಿಂದ ತಿಳಿದು ಅನುಷ್ಠಾನ ಮಾಡಿ, ಇಹದಲ್ಲಿ ಸುಖವನ್ನು ಮತ್ತು ಪರದಲ್ಲಿ ಶಾಶ್ವತ ಸುಖವನ್ನು ಸಂಪಾದಿಸುತ್ತಾ ಬಂದವರು ನಮ್ಮ ಭಾರತೀಯರು.

ಭಾರತಕ್ಕೆ ವಿಶ್ವಮಾನ್ಯತೆ ಲಭಿಸಿರುವುದು ಸಂಪತ್ತಿಗಾಗಿ ಅಲ್ಲ, ಜನಸಂಖ್ಯೆಗಾಗಿ ಅಲ್ಲ; ವೇದವಾಙ್ಮಯಕ್ಕಾಗಿ. ವೈದಿಕ ಸಾಹಿತ್ಯವು ವಿಶ್ವದ ಸಮಸ್ತ ವಾಙ್ಮಯರಾಶಿಯಲ್ಲೇ ಪ್ರಾಚೀನತಮ. ಅದು ಜ್ಞಾನನಿಧಿಯೂ ಆಗಿದೆ. ನಮ್ಮ ಜೀವನದ ಆದರ್ಶವನ್ನು ರೂಪಿಸಲು ಉಪಯುಕ್ತವಾದ ಸಂದೇಶ ಅದರಲ್ಲಿದೆ.

ಭಾರತೀಯ ಸಂಸ್ಕೃತಿಯ ಸೌಂದರ್ಯ ಮತ್ತು ಅದರ ಗಹನವಾದ ವೈಚಾರಿಕತೆಯು ವಿಶ್ವದಾದ್ಯಂತ ಪ್ರಶಂಸಿಸಲ್ಪಟ್ಟು, ಅತ್ಯಂತ ಗೌರವಕ್ಕೆ ಪಾತ್ರವಾಗಿದೆ. ಭಾರತೀಯ ಸಂಸ್ಕೃತಿಯ ವೈವಿಧ್ಯತೆಯ ಸುಂದರತ್ವ ಹಾಗೂ ಅದರ ಗೂಡಾರ್ಥವು ವಿಶೇಷವಾದದ್ದು. ಸಾಮಾನ್ಯವಾಗಿ ಪ್ರತಿಯೊಂದು ಭಾರತೀಯ ಸಂಪ್ರದಾಯದಲ್ಲೂ ವೈಜ್ಞಾನಿಕ, ತಾರ್ಕಿಕ, ಐತಿಹಾಸಿಕ, ಸಾಮಾಜಿಕ ಅಥವಾ ಆಧ್ಯಾತ್ಮಿಕ ಹಿನ್ನೆಲೆಯನ್ನೊಳಗೊಂಡಿರುತ್ತದೆ. ಇವುಗಳನ್ನು ಯಥಾವತ್ - ಅರ್ಥೈಸಿಕೊಳ್ಳುವುದಾದರೆ; ನಮ್ಮಲ್ಲಿರುವ ಅನೇಕ ಮೌಢ್ಯತೆಗಳನ್ನು ದೂರ ಮಾಡಿಕೊಳ್ಳಬಹುದು. ಇಲ್ಲವಾದರೆ ಇವುಗಳ ಆಚರಣೆ ಕೇವಲ ಯಾಂತ್ರಿಕವಾಗಿರುವುದಲ್ಲದೆ; ಮೂಢನಂಬಿಕೆಗಳು ಎಂದು ಅಪಾರ್ಥದ ದೃಷ್ಟಿಯಿಂದ ಜರೆಯುವಂತಾಗಿ, ಕಾಲಕ್ರಮೇಣ ನಶಿಸುವಂತಾಗುತ್ತದೆ.

ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವೆಂದರೆ; ಅದರ ಸ್ವಾವಲಂಬನೆ - ತನ್ನನ್ನು ತಾನೇ ಹುರಿದುಂಬಿಸಿಕೊಳ್ಳುವ ಸಾಮರ್ಥ್ಯ. ಯಾವ ಸಂಪ್ರದಾಯಗಳು ಅಪ್ರಚಲಿತವಾಗಿದ್ದವೋ; ಅದನ್ನು ಕಾಲಾನುಕ್ರಮದಲ್ಲಿ ಕೈಬಿಡಲಾಯಿತು. ಉದಾ: ನರಬಲಿ, ಪಶುಬಲಿ, ಸತಿಸಹಗಮನ, ಅಸ್ಪೃಶ್ಯತೆ ಇತ್ಯಾದಿ.

ಭಾರತೀಯ ಸಂಸ್ಕೃತಿಯು ಕಾಲಕ್ಕನುಗುಣವಾಗಿ - ಈಗಿನ ಆಧುನಿಕ ತಾಂತ್ರಿಕತೆಯನ್ನು ಸಮರ್ಪಕವಾಗಿ ಬಳಸಿಕೊಂಡಿದೆಯಾದರೂ; ತನ್ನ ಭವ್ಯಪರಂಪರೆಯನ್ನು ಬಿಟ್ಟುಕೊಟ್ಟಿರುವುದಿಲ್ಲ. ಕಾಲಕ್ಕೆ ತಕ್ಕ ಹಾಗೆ ಹೊಂದಿಕೊಳ್ಳುವ ಈ ಸಾಮರ್ಥ್ಯದಿಂದಲೇ, ಭಾರತವೂ; ತನ್ನ ಪುರಾತನ ಸಂಪ್ರದಾಯಗಳನ್ನು ಉಳಿಸಿಕೊಂಡಿರುವ ಅನೇಕ ರಾಷ್ಟ್ರಗಳಲ್ಲೊಂದು ಎಂದು ವಿಶ್ವದಾದ್ಯಂತ ಮಾನ್ಯತೆ ಪಡೆದಿದೆ. ಭಾರತೀಯ ಸಂಸ್ಕೃತಿಯಲ್ಲಿ ಮೂಡಿರುವ ಕೆಲವು ಸಂಪ್ರದಾಯಗಳ ರೀತಿ-ನೀತಿಗಳು ಬಹಳ ಸರಳ ಹಾಗೂ ಆಚರಣೆಯಲ್ಲಿ ತರುವಂತಹವು. ಇವುಗಳು ಈಗಲೂ ಸಹ ಪ್ರಚಲಿತವಾಗಿದ್ದು; ಅನೇಕ ಭಾರತೀಯ ಕುಟುಂಬದಲ್ಲಿ ಕ್ರಮಬದ್ಧವಾಗಿ ಆಚರಿಸಲಾಗುತ್ತಿದೆ.

ಇಂದಿನ ಮಕ್ಕಳಿಗೆ ನಮ್ಮ ಭಾರತೀಯ ಸನಾತನ ಸಂಸ್ಕೃತಿಯನ್ನು ಪರಿಚಯಿಸಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಸಂಸ್ಕಾರ ಹೀನ ವ್ಯಕ್ತಿಯ ಬದುಕು ಕಲ್ಪಿಸಿಕೊಳ್ಳಲೂ ಆಗದಿರುವಷ್ಟು ಅಸಹ್ಯವಾಗಿರುತ್ತದೆ.

ಈ ಕರ್ಮಭೂಮಿಯಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮನುಷ್ಯನಿಗೂ ಸ್ವಜಾತಿವಿಹಿತ ಸಂಸ್ಕಾರಗಳು ಅವಶ್ಯ ಕರ್ತವ್ಯಗಳಾಗಿವೆ. ಬ್ರಾಹ್ಮಣನಾದವನಿಗೆ ಷೋಡಶ ಸಂಸ್ಕಾರಗಳನ್ನು ಸ್ಮೃತಿಗಳಲ್ಲಿ ಮತ್ತು ಗೃಹ್ಯಸೂತ್ರಗಳಲ್ಲಿ ಹೇಳಲಾಗಿದೆ. ವಿಹಿತ ಕಾಲದಲ್ಲಿ ನಡೆಸುವ ಈ ಸಂಸ್ಕಾರಗಳಿಂದ ಆತನ ಆತ್ಮ ಮತ್ತು ಮನಸ್ಸು ಪರಿಷ್ಕಾರಹೊಂದಿ 'ಸದಾಚಾರ ಸಂಪನ್ನ ಸುಸಂಸ್ಕೃತ ಮಾನವನೆಂದೆನಿಸಿ' ಇಹದಲ್ಲೂ ಪರದಲ್ಲೂ ಸುಖಿಯಾಗಬಲ್ಲನು.



ಮನುಷ್ಯ ಹುಟ್ಟುವಾಗಲೇ ಪೂರ್ವಜನ್ಮದಲ್ಲಿ ತಾನು ಮಾಡಿದ ಶುಭ-ಅಶುಭ ಕರ್ಮಗಳ ಫಲದ ಗಂಟನ್ನು ಹೊತ್ತು ತಂದಿರುತ್ತಾನೆ. 'ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್' ಎಂಬ ಭಗವದುಕ್ತಿಯಂತೆ ಅದಕ್ಕೆ ಅನುಸಾರವಾದ ಒಳ್ಳೆಯ - ಕೆಟ್ಟ ಫಲಗಳನ್ನು ಅವನು ಅನುಭವಿಸಿಯೇ ತೀರಬೇಕೆಂಬುದು ಸೃಷ್ಟಿಯ ಒಂದು ನಿಯಮ. ಕರ್ಮಾಯತ್ತವಾಗಿ ಬರುವ ಒಳ್ಳೆಯ ಫಲಗಳನ್ನು ಸಂತೋಷದಿಂದಲೇ ಅನುಭವಿಸಬಹುದು. ಆದರೆ ಕೆಟ್ಟಫಲಗಳು ಉಂಟಾಗುವಾಗ ಬಹಳ ನೋವು-ದುಃಖಗಳನ್ನು ಅನುಭವಿಸಬೇಕಾಗುತ್ತದೆ. ಅಂತಹ ನೋವು ದುಃಖಗಳನ್ನು ಸಾಕಷ್ಟು ಸಹ್ಯ ಮಾಡಿಕೊಳ್ಳಲು ಅಂದರೆ ಅವುಗಳ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಲು ಪುರಾತನ ಋಷಿಮುನಿಗಳು ಬಹಳ ಕಾಲ ಪರಿಶ್ರಮ ಪಟ್ಟು ಕೆಲವು ಕ್ರಮಗಳನ್ನು ವೇದೋಕ್ತವಾಗಿ ಸಂಯೋಜಿಸಿ ಮನುಕುಲದ ಅನುಕೂಲಕ್ಕಾಗಿ ಅವುಗಳನ್ನು ಆಚರಣೆಗೆ ನೀಡಿರುತ್ತಾರೆ.

ಇಂದಿನ ಲೌಕಿಕ ಶಿಕ್ಷಣ ಕ್ರಮ ಮತ್ತು ಆಧುನಿಕ ಜೀವನ ವ್ಯವಸ್ಥೆಯಿಂದಾಗಿ ಕೆಲವು ಸಂಸ್ಕಾರಗಳು ರೂಢಿಯಲ್ಲಿಲ್ಲ. ಪ್ರಾಚೀನ ಭಾರತದಲ್ಲಿ ಬ್ರಾಹ್ಮಣನು ಉಪನಯನದ ಬಳಿಕ ಸಮಾವರ್ತನ ಪರ್ಯಂತ ಗುರುಕುಲವಾಸದಲ್ಲಿದ್ದು, ವೇದಾಧ್ಯಯನ ಮಾಡಿಕೊಂಡು ಬರುತ್ತಿದ್ದ ಕಾಲದಲ್ಲಿ ಈ ಎಲ್ಲಾ ಷೋಡಶ ಸಂಸ್ಕಾರಗಳು ರೂಢಿಯಲ್ಲಿದ್ದವು. ಈಗಿನ ಜನ ಜೀವನ ಪದ್ಧತಿಯಲ್ಲಿ ಬ್ರಾಹ್ಮಣನಿಗೂ ಲೌಕಿಕ ಶಿಕ್ಷಣ ಮತ್ತು ಉದ್ಯೋಗ ಅನಿವಾರ್ಯವಾಗಿದ್ದರೂ ಸಾಧ್ಯವಾದಷ್ಟು ಈ ಷೋಡಶ ಸಂಸ್ಕಾರಗಳನ್ನು ವಿಹಿತ ಕಾಲದಲ್ಲಿ ಮಾಡುವುದು ಪ್ರಶಸ್ತವಾಗಿದೆ.

ಹಿಂದೆ ಅವಿಭಕ್ತ ಕುಟುಂಬ ಪದ್ಧತಿಯಿದ್ದಾಗ ಮನೆಯ ಹಿರಿಯರು ಕಿರಿಯರಿಗೆ ನಿತ್ಯ ಬಾಯಿಪಾಠದ ಮೂಲಕ ನಮ್ಮ ಸನಾತನ ಸಂಸ್ಕೃತಿಯ ಧ್ಯೇಯೋದ್ದೇಶಗಳನ್ನು ಹೇಳಿ ಕಲಿಸುತ್ತಿದ್ದರು. ಇದರಿಂದ ಮಕ್ಕಳು ಸಂಸ್ಕಾರವಂತರಾಗಿ ಪರಿವರ್ತನೆ ಹೊಂದುತ್ತಿದ್ದರು. ಆದರೆ ಇಂದು ಮಕ್ಕಳು ಅನ್ಯಾನ್ಯಕಾರಣಗಳಿಂದಾಗಿ ಇದರಿಂದ ವಂಚಿತರಾಗುತ್ತಿದ್ದಾರೆ ಮತ್ತು ಸಂಸ್ಕಾರ ಹೀನ ವ್ಯಕ್ತಿಗಳಾಗಿ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ''ಸ್ವಸ್ಥ, ಶಾಂತ, ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿಸಂಸ್ಕಾರದ ಪಾತ್ರ ಹಿರಿದು'' ಆದರೆ ಇಂದು ಅಂತಹ ಮಹೋನ್ನತ ಸಂಸ್ಕಾರವನ್ನು ಕೊಡುವುದರಲ್ಲಿ ನಾವು ವಿಫಲರಾಗುತ್ತಿದ್ದೇವೆ.

ಇಂದಿನ ದಿನಗಳಲ್ಲಿ ಅಲ್ಲಲ್ಲಿ ವೈದಿಕಕರ್ಮಾನುಷ್ಠಾನಗಳು ಹೆಚ್ಚುತ್ತಿರುವುದು ಶುಭಸಂಕೇತ. ಜೊತೆಗೆ ವೈದಿಕಕರ್ಮಗಳನ್ನು ವಿಧಿವತ್ತಾಗಿ ನೆರವೇರಿಸುವ ಆಚಾರ್ಯರ ಅವಶ್ಯಕತೆಯೂ ಹೆಚ್ಚಿದೆ. ಇಂದಿನ ವಿಜ್ಞಾನ ಯುಗದಲ್ಲಿ ವೇದಮಂತ್ರಗಳ ಸಾರ್ಥಕತೆಯನ್ನೂ ಪ್ರಚುರಪಡಿಸಬೇಕಾದ ಹೊಣೆ ವೇದಾಧ್ಯಾಯಿಗಳಿಗಿದೆ (ಪುರೋಹಿತರಿಗೆ).

ಈ ಘೋರ ಕಲಿಯುಗದಲ್ಲಿ ಭಗವಾನ್ ವೇದವ್ಯಾಸರು ಹೇಳಿದಂತೆ, ನಾವು ಎಷ್ಟೇ ದಾನ, ಧರ್ಮ, ಪೂಜೆ - ಪುನಸ್ಕಾರ ಮಾಡಿದರೂ ಕಷ್ಟಕೋಟಲೆಗಳು ಮೇಲಿಂದ ಮೇಲೆ ಬರುತ್ತಲೇ ಇರುತ್ತವೆ. ನಾವು ಇಷ್ಟೆಲ್ಲ ದಾನ ಧರ್ಮ ಮಾಡಿದರೂ ಸಾತ್ವಿಕರಾದವರಿಗೇ ಏಕೆ ಕಷ್ಟಗಳು ಬರುತ್ತವೇ ಎಂಬ ಜಿಜ್ಞಾಸೆ ಪ್ರತಿಯೊಬ್ಬರನ್ನೂ ಕಾಡುವುದು ಸಹಜ. ನಾವು ಆಚರಣೆ ಮಾಡುವುದರಲ್ಲಿ ಏನಾದರೂ ಲೋಪವಿದೆಯೇ ? ಒಂದು ವೇಳೆ ತಪ್ಪಾಗಿದ್ದಲ್ಲಿ ಸರಿ ಮಾರ್ಗ ಯಾವುದು? ಯಾರು ಮಾರ್ಗದರ್ಶಿಗಳಾಗುತ್ತಾರೆ, ಯಾರ ಸಲಹೆ ಸೂಕ್ತ ಎಂಬ ಗೊಂದಲ ಇರಬಹುದು. ಈ ಸಂದೇಹ - ವಿಚಾರ ವಿನಿಮಯ, ಚಿಂತನ-ಮಂಥನಕ್ಕೆ ಗಮನ ಕೊಡುತ್ತ ಹಾಗೂ ಋಷಿಪುಂಗವರಾದ ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ, ಪರಾಶರ, ವೇದವ್ಯಾಸ, ವಾಲ್ಮೀಕಿ, ಯಾಜ್ಞವಲ್ಕ್ಯ, ಶುಕ, ಮುಂತಾದ ಮಹರ್ಷಿಗಳಿಂದ ಹಾಗೂ ಆದಿಗುರು ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮುಂತಾದ ಎಲ್ಲ ಗುರು ಪರಂಪರೆಯ, ಗುರುತತ್ತ್ವಗಳ ವಿಚಾರಧಾರೆಯನ್ನು ತಿಳಿಸುವ ಉದ್ದೇಶಕ್ಕಾಗಿ



ಗುರುಗಳಾದ ಶ್ರೀ ಕೃಷ್ಣಮೂರ್ತಿ ಶರ್ಮಾರವರ ಮಾರ್ಗದರ್ಶನದಲ್ಲಿ ಬಾದರಾಯಣ ಪ್ರತಿಷ್ಠಾನದ ವತಿಯಿಂದ 'ವೇದಾಲಯ' ಎಂಬ ಸಂಸ್ಥೆಯನ್ನು ಪ್ರಾರಂಭಿಸುತ್ತಿದ್ದೇವೆ. ಈ ಸಂಸ್ಥೆಯವತಿಯಿಂದ ''ಶುಭ ಸಮಾರಂಭಗಳನ್ನು ಶ್ರದ್ಧೆಯಿಂದ ಆಚರಿಸುವಂತ ಆಸಕ್ತರಿಗೆ, ಋಷಿಗಳು ತಿಳಿಸಿರುವ ರೀತಿಯಲ್ಲಿ ವೇದೋಕ್ತವಾಗಿ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಪುರೋಹಿತರನ್ನು ಸಂಯೋಜಿಸಲಾಗುವುದು.''

# ವೇದಾಲಯದ–ಮಾಹಿತಿ

## ಷೋಡಶ ಕರ್ಮಗಳು

೧. ಗರ್ಭಾದಾನ
೨. ಪುಂಸವನ
೩. ಸೀಮಂತ
೪. ಜಾತಕರ್ಮ
೫. ನಾಮಕರಣ
೬. ನಿಷ್ಕ್ರಮಣ
೭. ಅನ್ನಪ್ರಾಶನ
೮. ಚೌಲ
೯. ಉಪನಯನ
೧೦. ಮಹಾನಾಮ್ನೀ ವ್ರತ
೧೧. ಮಹಾವ್ರತ
೧೨. ಉಪನಿಷದ್ವ್ರತ
೧೩. ವಿಷ್ಣುಬಲಿ
೧೪. ಗೋದಾನ
೧೫. ಸಮಾವರ್ತನ
೧೬. ವಿವಾಹ... ಇತ್ಯಾದಿ

## ವ್ರತಗಳು

೧. ಶ್ರೀ ವರಸಿದ್ಧಿವಿನಾಯಕ ವ್ರತ
೨. ಸ್ವರ್ಣಗೌರೀ ವ್ರತ
೩. ಮಂಗಳಗೌರೀ ವ್ರತ
೪. ವರಮಹಾಲಕ್ಷ್ಮೀ ವ್ರತ
೫. ಶ್ರೀ ಅನಂತಪದ್ಮನಾಭ ವ್ರತ
೬. ಶ್ರೀ ಸತ್ಯನಾರಾಯಣ ವ್ರತ
೭. ಸಂಕಷ್ಟಹರ ಗಣಪತಿ ವ್ರತ
೮. ಜ್ಯೋತಿರ್ಭೀಮೇಶ್ವರ ವ್ರತ
೯. ಕೃಷ್ಣಾಷ್ಟಮೀ ವ್ರತ
೧೦.ಲಲಿತಾಸಹಸ್ರನಾಮ ವ್ರತ
೧೧. ಗಜಗೌರಿ ವ್ರತ
೧೨. ಅನಘಾ ವ್ರತ
೧೩. ಸತ್ಯ ಗಣಪತಿ ವ್ರತ
೧೪. ಶಿರ್ಡಿಸಾಯಿಬಾಬಾ ವ್ರತ
೧೫. ವಟ ಸಾವಿತ್ರಿ ವ್ರತ
೧೬. ನವರಾತ್ರಿ ವ್ರತ...ಇತ್ಯಾದಿ

## ಶಾಂತಿಗಳು

೧. ಗೋಮುಖ ಪ್ರಸವ ಶಾಂತಿ
೨. ಬಾಲಾರಿಷ್ಟ ಶಾಂತಿ
೩. ಕಾಳಸರ್ಪ ಶಾಂತಿ
೪. ನಕ್ಷತ್ರ ಶಾಂತಿ
೫. ಗ್ರಹಣ ಶಾಂತಿ
೬. ಯಮಳ ಜನನ ಶಾಂತಿ
೭. ತ್ರಿಕ ಪ್ರಸವ ಶಾಂತಿ
೮. ಕಪೋತ ಪಿಂಗಲಾದಿ ಶಾಂತಿ
೯. ವಾಸ್ತು ಶಾಂತಿ
೧೦. ಆಶ್ಲೇಷಾಬಲಿ ಶಾಂತಿ
೧೧. ಅರ್ಕ/ಕದಳಿ ವಿವಾಹ ಶಾಂತಿ
೧೨. ಉಗ್ರರಥ ಶಾಂತಿ
೧೩. ಭೀಮರಥ ಶಾಂತಿ
೧೪. ಸಹಸ್ರಚಂದ್ರದರ್ಶನ ಶಾಂತಿ
೧೫. ಕನಕಾಭಿಷೇಕ ಶಾಂತಿ
೧೬. ಶತಾಭಿಷೇಕ ಶಾಂತಿ...ಇತ್ಯಾದಿ

## ಹೋಮಗಳು

೧. ಮಹಾಗಣಪತಿ ಹೋಮ
೨. ನವಗ್ರಹ ಹೋಮ
೩. ಆಯುಷ್ಯ ಹೋಮ
೪. ಮೃತ್ಯುಂಜಯ ಹೋಮ
೫. ರುದ್ರ ಹೋಮ
೬. ರಾಮತಾರಕ ಹೋಮ
೭. ಪವಮಾನ ಹೋಮ
೮. ಮಹಾ ಸುದರ್ಶನ ಹೋಮ
೯. ಧನ್ವಂತರಿ ಹೋಮ
೧೦. ನಾರಾಯಣ ಹೃದಯ ಹೋಮ
೧೧. ಚಂಡೀ ಹೋಮ
೧೨. ಸುಬ್ರಹ್ಮಣ್ಯ ಹೋಮ
೧೩. ಸರ್ಪಸೂಕ್ತ ಹೋಮ
೧೪. ಮಹಾಸೌರ ಹೋಮ
೧೫. ಶತಚಂಡೀ ಯಾಗ
೧೬. ಅತಿರುದ್ರ ಮಹಾಯಾಗ... ಇತ್ಯಾದಿ

ಕೃಣ್ವಂತೋ ವಿಶ್ವಮಾರ್ಯಮ್ - ವಿಶ್ವವನ್ನೇ ಸುಸಂಸ್ಕಾರಗೊಳಿಸೋಣ.